# ಸಂಪಾದಕೀಯ

# ಪೂರ್ಣದೃಷ್ಟಿ

ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ ॥

*"ಅದು ಎಂದರೆ ಪರಬ್ರಹ್ಮವು ಪೂರ್ಣ, ಇದು ಎಂದರೆ ಕಾರ್ಯರೂಪವಾದ ಜಗತ್ತೂ ಪೂರ್ಣ, (ಏಕೆಂದರೆ ಈ ಜಗತ್ತು ಆ ಪೂರ್ಣತೆಯ ಅಭಿವ್ಯಕ್ತಿ). ಪೂರ್ಣದಿಂದ ಪೂರ್ಣವನ್ನು ತೆಗೆದರೆ, ಅಂದರೆ ಆ ಪೂರ್ಣಬ್ರಹ್ಮದಿಂದ ಈ ಜಗತ್ತು ಬಂದಿದ್ದರೂ ಅದು ಪೂರ್ಣವಾಗಿಯೇ ಉಳಿಯುತ್ತದೆ. (ಏಕೆಂದರೆ ಬ್ರಹ್ಮದಿಂದ ಏನನ್ನೂ ಕಳೆಯಲಾಗುವುದಿಲ್ಲ. ಹಗ್ಗದಲ್ಲಿ ಸರ್ಪ ಕಾಣಿಸಿಕೊಂಡರೂ ಹಗ್ಗದ ಸ್ವರೂಪವೇನೂ ಬದಲಾಗುವುದಿಲ್ಲ.)"*

ಪ್ರತಿಯೊಂದು ವಸ್ತುವೂ ಒಂದು ದೃಷ್ಟಿಯಲ್ಲಿ ಪೂರ್ಣವೇ. ಅದು ಅನೇಕ ಭಾಗಗಳಿಂದ ಒಳಗೂಡಿದ್ದು ಅವೆಲ್ಲವೂ ಸೇರಿ ಒಂದು ಪೂರ್ಣವಾಗಿದೆ. ಹಾಗೆಯೇ ಅದು ಬೇರೊಂದರ ಭಾಗವೂ ಆಗಿರುತ್ತದೆ. ಆ ಬೇರೊಂದು ವಸ್ತು ಅನೇಕ ಭಾಗಗಳಿಂದ ಪೂರ್ಣವಾಗಿರುತ್ತದೆ. ಒಂದು ಮೇಜು ಅಥವಾ ಕುರ್ಚಿ ಅನೇಕ ಭಾಗಗಳಿಂದ ಕೂಡಿ ಒಂದು ಪೂರ್ಣವಸ್ತುವಾಗಿರುತ್ತದೆ. ಈ ಮೇಜು, ಕುರ್ಚಿ ಇನ್ನೂ ಅನೇಕ ಪೀಠೋಪಕರಣಗಳೆಲ್ಲ ಸೇರಿ ಒಂದು ಪೂರ್ಣ ಮನೆಯಾಗುತ್ತದೆ. ಈ ಮನೆ ಪೂರ್ಣ ಸಮಾಜದ ಒಂದು ಭಾಗವಾಗುತ್ತದೆ. ಹೀಗೆ ಇದು ಮುಂದುವರಿಯುತ್ತದೆ. ದೇಹದಲ್ಲಿನ ಪ್ರತಿಯೊಂದು ಜೀವಕೋಶವೂ ಪೂರ್ಣ, ಈ ಜೀವಕೋಶಗಳೆಲ್ಲ ಸೇರಿ ಪೂರ್ಣದೇಹವಾಗಿದೆ. ಮತ್ತೆ ಈ ದೇಹ ಪೂರ್ಣ ಜೀವಕೋಟಿಯ ಅಂಶ. ಹೀಗೆ ಈ ಪ್ರಪಂಚದಲ್ಲಿ ಪ್ರತಿಯೊಂದೂ ಪೂರ್ಣವೂ ಹೌದು, ಅಂಶವೂ ಹೌದು. ಅಂಶದಲ್ಲಿ ಪೂರ್ಣವನ್ನೂ ಪ್ರತಿಯೊಂದನ್ನೂ ಪೂರ್ಣತೆಯ ಅಂಶವಾಗಿಯೂ ಕಾಣುವ ಪ್ರವೃತ್ತಿ ಪೂರ್ಣತೆಯ ದೃಷ್ಟಿ. ಇದು ಸಂಕುಚಿತ ಮನೋಭಾವವನ್ನು ತೊಡೆದುಹಾಕುತ್ತದೆ.

ಪಿಂಡಾಂಡ ಮತ್ತು ಬ್ರಹ್ಮಾಂಡಗಳೆರಡೂ ಒಂದೇ ರೀತಿಯಲ್ಲಿ ರಚಿಸಲ್ಪಟ್ಟಿವೆಯೆಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಬ್ರಹ್ಮಾಂಡದಲ್ಲಿ ಭೌತಿಕ ಜಗತ್ತು (ವಿರಾಟ್) ಇರುವಂತೆ ಜೀವಿಗಳ ಭೌತಿಕ ದೇಹವಿದೆ. ಬ್ರಹ್ಮಾಂಡದಲ್ಲಿ ವಿಶ್ವ ಮನಸ್ಸು (ಹಿರಣ್ಯಗರ್ಭ) ಇರುವಂತೆ ವ್ಯಷ್ಟಿಮನಸ್ಸಿದೆ. ಹಾಗೆಯೇ ವಿಶ್ವಾತ್ಮ ಮತ್ತು ಜೀವಾತ್ಮ. ಹೀಗೆ ಬ್ರಹ್ಮಾಂಡ ಪಿಂಡಾಂಡಗಳೆರಡೂ ಪೂರ್ಣ. ಆದ್ದರಿಂದ ಪ್ರತಿಯೊಂದೂ ಇಡೀ ವಿಶ್ವದ ಪ್ರತಿರೂಪಗಳು. ಪ್ರತಿಯೊಂದೂ ಇಡೀ ವಿಶ್ವವನ್ನು ಪ್ರತಿಬಿಂಬಿಸುವ ಕನ್ನಡಿಯಿದ್ದಂತೆ—ಒಂದು ಹನಿಯಲ್ಲಿ ಸೂರ್ಯನ ಬಿಂಬವನ್ನು ಕಾಣುವಂತೆ. **ಕರಿಯು ಕನ್ನಡಿಯೊಳಗಡಗಿದಂತಯ್ಯ, ನೀನೆನ್ನೊಳಡಗಿಹೆ ಕೂಡಲ ಸಂಗಯ್ಯ**—ಎಂದು ಬಸವಣ್ಣನವರು ಹಾಡಿದುದೂ ಇದೇ ಅರ್ಥದಲ್ಲಿರಬಹುದು. ಇದೇ ಬಿಂದುವಿನಲ್ಲಿ ಸಿಂಧುವನ್ನು ಕಾಣುವುದು—ಇದೇ ಪೂರ್ಣದೃಷ್ಟಿ.

ವಿಲಿಯಂ ಬ್ಲೇಕ್ ಪೂರ್ಣದೃಷ್ಟಿಯನ್ನು ಹೀಗೆ ವ್ಯಕ್ತಪಡಿಸುತ್ತಾನೆ:

*To see a world in a grain of sand,*
*And a Heaven in a wild flower,*
*Hold Infinity in the palm of your hand,*
*And Eternity in an hour.*

*"(ಮರಳ ಕಣದಲ್ಲಿ ಇಡೀ ವಿಶ್ವವನ್ನು ಕಾಣುವುದು, ಕಾನನ ಪುಷ್ಪದಲ್ಲಿ ಸ್ವರ್ಗ ಕಾಣುವುದು, ಅನಂತವನ್ನು ನಿನ್ನ ಅಂಗೈಯಲ್ಲಿ ಹಿಡಿಯುವುದು ಮತ್ತು ಒಂದು ಗಂಟೆಯಲ್ಲಿ ಶಾಶ್ವತತೆಯನ್ನು ಕಾಣುವುದು.)"*

ಯಾವುದಕ್ಕೆ ಮತ್ತೆ ಹೊಸದಾಗಿ ಸೇರಿಸಲಾಗುವುದಿಲ್ಲವೋ ಮತ್ತು ಯಾವುದರಿಂದ ಏನನ್ನೂ ತೆಗೆಯಲಾಗುವುದಿಲ್ಲವೋ ಅದು ಪೂರ್ಣ. ಒಂದು ಲೋಟದ ತುಂಬ ನೀರಿದ್ದರೆ ಅದಕ್ಕೆ ಇನ್ನು ಒಂದು ಹನಿ ನೀರನ್ನೂ ಸೇರಿಸಲಾಗುವುದಿಲ್ಲ. ಆ ಲೋಟ ನೀರಿನಿಂದ ಪೂರ್ಣವಾಗಿದೆ. ಅದರಿಂದ ಸ್ವಲ್ಪ ನೀರನ್ನು ತೆಗೆದರೂ ಅದು ತನ್ನ ಪೂರ್ಣತೆಯನ್ನು ಕಳೆದುಕೊಳ್ಳುತ್ತದೆ. ಹೀಗೆಯೇ ಪೂರ್ತಿಯಾಗಿ ಮಾಡಿ ಮುಗಿಸಿದ ಕೆಲಸವನ್ನು ಪೂರ್ಣವಾಗಿದೆ ಎನ್ನುತ್ತೇವೆ. ಇನ್ನೊಂದು ಅರ್ಥದಲ್ಲಿ ಪೂರ್ಣವೆಂದರೆ ದೋಷಮುಕ್ತವಾಗಿರುವುದು. ಒಂದು ಕೆಲಸವನ್ನು ಪೂರ್ತಿಯಾಗಿ ಮಾಡುವುದಲ್ಲದೆ ಸರಿಯಾಗಿಯೂ ಮಾಡಬೇಕು. ಆಗ 'ಪೂರ್ಣ' ಎಂಬ ಪದಕ್ಕೆ 'ಪರಿ' ಎಂಬ ಉಪಸರ್ಗ ಸೇರಿಸಿ, ಆ ಕೆಲಸ ಪರಿಪೂರ್ಣವಾಗಿದೆ ಎನ್ನುತ್ತೇವೆ. ಹಾಗೆಯೇ ದೋಷಮುಕ್ತವಾದ ವಸ್ತುಗಳನ್ನೂ ವ್ಯಕ್ತಿಗಳನ್ನೂ ಪರಿಪೂರ್ಣ ಎನ್ನುತ್ತೇವೆ.

ಪ್ರತಿಯೊಂದು ವಸ್ತುವೂ ಪೂರ್ಣ ಎಂದಮೇಲೆ ಅಪರಿಪೂರ್ಣತೆಗೆ ಅವಕಾಶವೆಲ್ಲಿ ಎಂಬ ಪ್ರಶ್ನೆ ಏಳುತ್ತದೆ. ಈ ಅಪರಿಪೂರ್ಣತೆಯ ಕಲ್ಪನೆ ಆಂಶಿಕದೃಷ್ಟಿ. ಸಮಷ್ಟಿದೃಷ್ಟಿಯಿಂದ ನೋಡಿದಾಗ ದೋಷವೂ ನಿರ್ದೋಷವಾಗಿ ಕಾಣುತ್ತದೆ. ಅಪೂರ್ಣತೆ ಮತ್ತು ಅಪರಿಪೂರ್ಣತೆಗಳು ಉಂಟಾಗುವುದು ಮತ್ತು ಅವುಗಳನ್ನು ನಾವು ಸರಿಪಡಿಸುವುದು ಇವೆಲ್ಲವೂ ಒಟ್ಟು ವಿಶ್ವ ಯೋಜನೆಯ ಅವಿಭಾಜ್ಯ ಅಂಗಗಳು, ಅವುಗಳಾವುವನ್ನೂ

ದೋಷವೆಂದು ಕರೆಯಲಾಗುವುದಿಲ್ಲ. ನಾವು ಒಂದು ಚಿತ್ರದ ಭಾಗವನ್ನು ಮಾತ್ರ ನೋಡಿದಾಗ ಅದರಲ್ಲಿ ಕೆಲವು ಗೆರೆಗಳು ಮತ್ತು ಬಣ್ಣಗಳು ದೋಷಪೂರ್ಣವಾಗಿ ಕಾಣಬಹುದು. ಆದರೆ ಒಟ್ಟು ಚಿತ್ರವನ್ನು ನೋಡಿದಾಗ ಎಲ್ಲವೂ ಅರ್ಥಪೂರ್ಣವಾಗಿ ಕಾಣುತ್ತವೆ. ಇದು ಪೂರ್ಣದೃಷ್ಟಿ—ಎಲ್ಲವನ್ನೂ ಒಟ್ಟು ಭಾವದಿಂದ ನೋಡುವುದು.

"ನಾವು ಮರದ ಅಧ್ಯಯನ ಮಾಡುತ್ತ ಕಾಡನ್ನು ಮರೆಯುತ್ತೇವೆ, ರೆಂಬೆಗಳ ಅಧ್ಯಯನ ಮಾಡುತ್ತ ಮರವನ್ನು ಮರೆಯುತ್ತೇವೆ. ಸಮಷ್ಟಿಯನ್ನು ಬಿಟ್ಟು ವ್ಯಷ್ಟಿಯ ಯಥಾರ್ಥಜ್ಞಾನ ಅಸಾಧ್ಯ."

ಇತ್ತೀಚೆಗೆ ಜ್ಞಾನವನ್ನು ವಿಭಾಗೀಕರಿಸುವ ರೂಢಿ ಜಾಸ್ತಿಯಾಗಿದೆ. "ವಿಜ್ಞಾನವೆಂದರೆ ಸ್ವಲ್ಪಸ್ವಲ್ಪದರ ಬಗ್ಗೆ ಹೆಚ್ಚು ಹೆಚ್ಚು ತಿಳಿಯುವುದು" ಎಂದು ಹೇಳುತ್ತಾರೆ. ನಮ್ಮಲ್ಲಿ ಜ್ಞಾನದ ವಿವಿಧ ವಿಭಾಗಗಳಿವೆ, ಆದರೆ ಪೂರ್ಣದೃಷ್ಟಿ ಕಡಮೆಯಾಗಿದೆ. ದಿನಗಳು ಕಳೆದಂತೆಲ್ಲ ಜ್ಞಾನದ ಪರಿಧಿ ವಿಸ್ತರಿಸುತ್ತ ಹೋಗುತ್ತಿದೆ—ಜ್ಞಾನ ವಿಭಾಗಗಳ ಸಂಖ್ಯೆ ಅಧಿಕವಾಗುತ್ತಿದೆ. ಮೊದಲು ರಸಾಯನ ಶಾಸ್ತ್ರ, ಭೌತಶಾಸ್ತ್ರ, ಖಗೋಳಶಾಸ್ತ್ರ, ಜೀವಶಾಸ್ತ್ರ—ಹೀಗೆ ಕೆಲವು ಮುಖ್ಯವಾದ ಜ್ಞಾನಪ್ರಭೇದಗಳಿದ್ದವು. ಈಗ ಆಸ್ಟ್ರೋಫಿಸಿಕ್ಸ್, ಬಯೋಕೆಮಿಸ್ಟ್ರಿ, ಮೈಕ್ರೋಬಯಾಲಜಿ—ಇವೇ ಮುಂತಾದ ಹಲವಾರು ಜ್ಞಾನಪ್ರಭೇದಗಳಿವೆ. ಈ ಎಲ್ಲ ವಿಷಯಗಳಲ್ಲಿಯೂ ವಿಶೇಷತಜ್ಞರ ಸಂಖ್ಯೆಯೂ ಅಧಿಕವಾಗುತ್ತಿದೆ. ಹಾಗೆಯೇ ವೈದ್ಯಕೀಯದಲ್ಲಿಯೂ ವಿಶೇಷಜ್ಞತೆ (*specialization*) ಜಾಸ್ತಿಯಾಗುತ್ತಿದೆ. ಇದರಿಂದಾಗಿ ನಾವು ಪೂರ್ಣದೃಷ್ಟಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಇದರಿಂದಾಗಿ ವ್ಯಕ್ತಿ ಹೆಚ್ಚು ಸಂಕುಚಿತನಾಗುತ್ತಾನೆ. ಲಿನ್ ಯುಟಾಂಗ್ ಎಂಬ ಚೈನೀ ಚಿಂತಕನು ಹೇಳುತ್ತಾನೆ: "ನಾವು ಮಾನವ ಸಂಸ್ಕೃತಿಯ ಯಾವ ಹಂತವನ್ನು ತಲುಪಿದ್ದೇವೆಂದರೆ ನಮ್ಮಲ್ಲಿ ಜ್ಞಾನವಿಭಾಗಗಳಿವೆ, ಆದರೆ ಜ್ಞಾನವೇ ಇಲ್ಲ; ವಿಶೇಷಜ್ಞತೆ ಇದೆ, ಆದರೆ ಸಮಗ್ರತೆಯಿಲ್ಲ; ವಿಶೇಷತಜ್ಞರಿದ್ದಾರೆ, ಆದರೆ ವಿವೇಕಯುಕ್ತ ತತ್ತ್ವಜ್ಞಾನಿಗಳಿಲ್ಲ."

ಈ ಪೂರ್ಣದೃಷ್ಟಿಯ ಕೊರತೆಯೇ, ಅಂದರೆ ಮಾನವನ ಮತ್ತು ಸಮಾಜದ ಒಟ್ಟು ಅಥವಾ ಸಮಗ್ರ ಪರಿಕಲ್ಪನೆಯ ಕೊರತೆಯೇ ವ್ಯಕ್ತಿಯ ಸ್ವಾರ್ಥಕ್ಕೂ ಅದರ ಉತ್ಪನ್ನಗಳಾದ ಅನೀತಿ, ಅತ್ಯಾಚಾರ, ಭ್ರಷ್ಟಾಚಾರ, ಪರಿಸರನಾಶ ಇತ್ಯಾದಿಗಳಿಗೂ ಕಾರಣ.

ನಮ್ಮ ಬಗ್ಗೆಯೂ ನಮಗೆ ಒಂದು ಪೂರ್ಣದೃಷ್ಟಿ ಇರಬೇಕು. ನಮ್ಮನ್ನು ನಾವು ಪೂರ್ಣವಾಗಿ ಸ್ವೀಕರಿಸಬೇಕು. ನಮ್ಮಲ್ಲಿನ ಕೆಲವು ಅಂಶಗಳು ನಮಗೆ ತೀರ ಅಸಹ್ಯವಾಗಿ ಕಾಣಬಹುದು. ನಮ್ಮಲ್ಲಿರುವ ಪಾಶವಿಕ ಗುಣಗಳನ್ನು ನೋಡಿದಾಗ ನಮಗೆ ತುಂಬ ಜುಗುಪ್ಸೆ ಉಂಟಾಗಿ ಅವುಗಳನ್ನು ಮರೆಯಲು ಪ್ರಯತ್ನಿಸುತ್ತೇವೆ—ಅವುಗಳನ್ನು ಸುಪ್ತಪ್ರಜ್ಞೆಯ ಆಳಕ್ಕೆ ತಳ್ಳಿಬಿಡುತ್ತೇವೆ. ಆದರೆ ನಾವು ಅವನ್ನು ಮರೆತರೂ ಅವು ನಮ್ಮನ್ನು ಮರೆಯುವುದಿಲ್ಲ, ಬೇರೆ ಬೇರೆ ಮನೋವಿಕಾರಗಳ ರೂಪದಲ್ಲಿ—ದೈಹಿಕ ವ್ಯಾಧಿಗಳ ರೂಪದಲ್ಲಿಯೂ—ಅವು ಪರೋಕ್ಷವಾಗಿ ನಮ್ಮನ್ನು ಕಾಡುತ್ತವೆ. ಕೆಲವೊಮ್ಮೆ ನಮ್ಮಲ್ಲಿರುವ ದೋಷಗಳನ್ನು ನಮ್ಮಲ್ಲಿ ಕಾಣಲಾಗದೆ ಅವನ್ನು ಇತರರ ಮೇಲೆ ಆರೋಪಿಸಿ ನಾವು ದೋಷಮುಕ್ತರೆಂದು ಭ್ರಮಿಸುತ್ತೇವೆ. ಈ ಮೂಲಕ ನಮ್ಮನ್ನು ನಾವೇ ವಂಚಿಸಿಕೊಳ್ಳುತ್ತೇವೆ. ಆದ್ದರಿಂದ ನಮ್ಮನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕು. ನಮ್ಮ ದೋಷಗಳನ್ನೂ ನಾವು ಒಪ್ಪಿಕೊಂಡು ಅವುಗಳನ್ನು ಗೆಲ್ಲಲು ಪ್ರಯತ್ನಿಸಬೇಕು. ಕಾಮಕ್ರೋಧಾದಿಗಳನ್ನು ಅರಿಷಡ್ವರ್ಗಗಳೆಂದು ತಿಳಿದು ಅವುಗಳೊಡನೆ ಸದಾ ಯುದ್ಧ ಮಾಡುತ್ತಿರುವುದಕ್ಕಿಂತ ಅವುಗಳನ್ನು ಉನ್ನತ ದಿಕ್ಕಿಗೆ ಹರಿಸಿ ಉದಾತ್ತೀಕರಿಸಬೇಕು, ಶ್ರೀರಾಮಕೃಷ್ಣರು ಹೇಳುವಂತೆ, ಅವುಗಳ ದಿಕ್ಕನ್ನು ಬದಲಾಯಿಸಬೇಕು.

ನಮ್ಮ ವ್ಯಕ್ತಿತ್ವವನ್ನು ವಿಭಾಗಿಸಿ ಒಳಿತು-ಕೆಡುಕುಗಳ, ಸುಖ-ದುಃಖಗಳ, ಪಾಪ-ಪುಣ್ಯಗಳ ನಡುವೆ ಗೆರೆ ಎಳೆಯುತ್ತೇವೆ. ಇದರಿಂದ ನಮ್ಮ ವ್ಯಕ್ತಿತ್ವದಲ್ಲಿ ಬಿರುಕು ಉಂಟಾಗುತ್ತದೆ. ನಿಜವಾಗಿಯೂ ಇವುಗಳನ್ನು ಗೆರೆ ಎಳೆದು ಸಂಪೂರ್ಣ ಪ್ರತ್ಯೇಕಿಸಲಾಗುವುದಿಲ್ಲ. ಕತ್ತಲೆಯೆಂದರೆ ಬೆಳಕಿನ ಅಭಾವವಲ್ಲ, ಕಡಮೆ ಬೆಳಕು ಅಥವಾ ಮನುಷ್ಯನ ಕಣ್ಣಿಗೆ ಕತ್ತಲೆ ಅಷ್ಟೆ. ಹಾಗೆಯೇ ಕೆಡುಕು ಎಂದರೆ ಒಳಿತಿನ ಪ್ರಮಾಣ ಕಡಮೆ ಇರುವುದು ಎಂದು ಹೇಳಬಹುದು. ಸಂಪೂರ್ಣ ಕೆಡುಕೆಂಬುದಾಗಲಿ, ಸಂಪೂರ್ಣ ಒಳಿತೆಂಬುದಾಗಲಿ ಇಲ್ಲವೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಈ ಮಾತು ಎಲ್ಲ ದ್ವಂದ್ವಗಳಿಗೂ ಅನ್ವಯಿಸುತ್ತದೆ.

ಕೆನ್ ವಿಲ್ಬರ್ ಎಂಬ ಮನಶ್ಶಾಸ್ತ್ರಜ್ಞರೂ ಆಧುನಿಕ ಮಹಾ ಚಿಂತಕರೂ ಹೇಳುತ್ತಾರೆ : "ಘರ್ಷಣೆ ಮತ್ತು ವಿರೋಧಗಳ ಜಗತ್ತಿನಲ್ಲಿ ನಾವು ಬಾಳುತ್ತೇವೆ, ಏಕೆಂದರೆ ನಾವು ಗಡಿರೇಖೆ (boundaries) ಗಳ ನಡುವೆ ವಾಸಿಸುತ್ತೇವೆ. ಪ್ರತಿಯೊಂದು ಗಡಿರೇಖೆಯೂ ಯುದ್ಧದ ಗೆರೆಯೇ. ನಮ್ಮ ಗಡಿರೇಖೆ ಹೆಚ್ಚು ದೃಢವಾದಷ್ಟೂ ಘರ್ಷಣೆಯೂ ತೀವ್ರವಾಗುತ್ತದೆ. ನಾವು ಸುಖವನ್ನು ಗಟ್ಟಿಯಾಗಿ ಹಿಡಿದುಕೊಂಡಷ್ಟೂ ನಮಗೆ ದುಃಖದ ಭಯ ಅಧಿಕವಾಗುತ್ತದೆ. ನಾವು ಒಳ್ಳೆಯತನಕ್ಕೆ ಹೆಚ್ಚು ಬದ್ಧರಾದಷ್ಟೂ ಕೆಡುಕು ನಮ್ಮನ್ನು ಕಾಡುತ್ತದೆ. ನಾವು ಯಶಸ್ಸಿಗಾಗಿ ಹಾತೊರೆದಷ್ಟೂ ಸೋಲು ಹೆಚ್ಚು ಭಯಂಕರವಾಗಿ ಕಾಣುತ್ತದೆ. ನಾವು ಜೀವನಕ್ಕೆ ಹೆಚ್ಚು ಅಂಟಿಕೊಂಡಷ್ಟೂ ಸಾವು ಹೆಚ್ಚು ಭಯಾನಕವಾಗುತ್ತದೆ. ಯಾವುದೇ ಒಂದಕ್ಕೆ ನಾವು ಹೆಚ್ಚು ಬೆಲೆಯನ್ನಿತ್ತರೆ ಅದರ ನಷ್ಟ ನಮಗೆ ತೀರ ಅಸಹನೀಯವಾಗುತ್ತದೆ" (*No Boundary,* p.19).

ನಾವು ಈ ಎಲ್ಲ ಗಡೀರೇಖೆಗಳನ್ನೂ ದಾಟಿ ಪೂರ್ಣ ವ್ಯಕ್ತಿತ್ವವನ್ನು ಪಡೆಯಬೇಕು. ಉನ್ನತ ಆಧ್ಯಾತ್ಮಿಕ ಆದರ್ಶದೊಂದಿಗೆ ನಮ್ಮ ವ್ಯಕ್ತಿತ್ವ ಮೇಳೈಸಿದಾಗ ಜೀವನ ಅರ್ಥಪೂರ್ಣವಾಗುತ್ತದೆ. ಆಗ

ನಮ್ಮ ಜೀವನದ ಪ್ರತಿಯೊಂದು ಅಂಶವೂ ಪ್ರತಿಯೊಂದು ಆಗುಹೋಗುಗಳೂ ಸುಖದುಃಖಾದಿ ಪ್ರತಿಯೊಂದು ಸನ್ನಿವೇಶಗಳೂ ಅರ್ಥಪೂರ್ಣವಾಗುತ್ತವೆ. ಜೀವನದಲ್ಲಿ ಪೂರ್ಣತೆಯನ್ನು ಪಡೆಯುವುದೆಂದರೆ ಇದೇ—ಒಂದು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಜೀವನದ ಎಲ್ಲ ಅಂಶಗಳನ್ನೂ ಹೊಂದಿಸುವುದು. ನಮ್ಮ ಆಧ್ಯಾತ್ಮಿಕ ಆದರ್ಶ ತೀವ್ರವಾದಷ್ಟೂ, ಈ ಹೊಂದಾಣಿಕೆ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಆಧ್ಯಾತ್ಮಿಕ ಆದರ್ಶಕ್ಕೆ ಹೊಂದಾಣಿಕೆಯಾಗದ ಹಲವಾರು ಅಂಶಗಳು ತಾವಾಗಿಯೇ ಬಿದ್ದುಹೋಗುತ್ತವೆ.

ಪೂರ್ಣವ್ಯಕ್ತಿತ್ವವನ್ನು ಪಡೆಯುವುದರ ಜತೆಗೆ ನಾವು ಒಟ್ಟು ಸಮಾಜದೊಡನೆ ಒಂದಾಗಬೇಕು. ನಾವು ಸಮಾಜದ ಅವಿಭಾಜ್ಯ ಅಂಗ—ಅದರ ಪೂರ್ಣತೆಯಲ್ಲಿ ನಾವೆಲ್ಲ ಭಾಗಿಗಳು. ಸಮಾಜದ ಒಂದು ಪೂರ್ಣದೃಷ್ಟಿ ನಮಗಿಲ್ಲದಿದ್ದರೆ, ಮತ್ತು ನಮ್ಮನ್ನು ಆ ಸಮಾಜದೊಡನೆ ಸಮರ್ಪಕವಾಗಿ ಒಂದಾಗಿಸಿಕೊಳ್ಳಲು ಸಾಧ್ಯವಾಗದಿದ್ದರೆ, ನಾವು ಸಮಾಜಕಂಟಕರಾಗುತ್ತೇವೆ. ಸಮಾಜವೂ ನಮ್ಮ ವ್ಯಕ್ತಿತ್ವದ ಭಾಗವಾಗುವಷ್ಟು ನಾವು ವಿಸ್ತಾರಗೊಳ್ಳಬೇಕು. ಆಗ ಸಮಾಜಕ್ಕೆ ಹಾನಿಯನ್ನುಂಟುಮಾಡುವುದು ಅಸಾಧ್ಯವಾಗುತ್ತದೆ. ನಮ್ಮ ದೇಹ ನಮ್ಮ ವ್ಯಕ್ತಿತ್ವದ ಒಂದು ಅಂಶವಾಗಿರುವುದರಿಂದ ಅದನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ. ಇದನ್ನು ಯಾರೂ ಹೇಳಬೇಕಾಗಿಲ್ಲ, ಇದಕ್ಕೆ ಯಾರೂ ಸಂಬಳ ಕೊಡಬೇಕಾಗಿಲ್ಲ. ಹಾಗೆಯೇ ಸಮಾಜವನ್ನು ನೋಡಿಕೊಳ್ಳುವುದೂ ಅದನ್ನು ಆರೋಗ್ಯವಂತವಾಗಿ ಇಟ್ಟಿರುವುದೂ ನಮ್ಮೆಲ್ಲರ ಕರ್ತವ್ಯ. ಹಿಂಸೆ, ಅನೈತಿಕತೆ, ಅನ್ಯಾಯ ಇತ್ಯಾದಿಗಳ ಮೂಲಕ ಸಮಾಜವನ್ನು ವಿಷಪೂರಿತಗೊಳಿಸಿದರೆ ಅದರ ದುಷ್ಪರಿಣಾಮಗಳಿಗೆ ನಾವೇ ಒಳಗಾಗಬೇಕಾಗುತ್ತದೆ. ನಾವು ಪ್ರಾಕೃತಿಕ ಮತ್ತು ಸಾಮಾಜಿಕ ಎಂಬ ಎರಡು ವಾತಾವರಣದಲ್ಲಿ ವಾಸಿಸುತ್ತೇವೆ. ಈ ಎರಡೂ ವಾತಾವರಣ ಸುಸ್ಥಿತಿಯಲ್ಲಿರುವುದು, ಆರೋಗ್ಯವಾಗಿರುವುದು ಅತ್ಯಂತ ಮುಖ್ಯ. ಈ ವಿಷಯದಲ್ಲಿ ನಮ್ಮೆಲ್ಲರ ಜವಾಬ್ದಾರಿಯಿದೆ. ಈ ಜವಾಬ್ದಾರಿಯ ಪ್ರಜ್ಞೆ ನಮ್ಮಲ್ಲಿಲ್ಲದಿದ್ದರೆ ನಾವು ಸಮಾಜಕಂಟಕರಾಗುತ್ತೇವೆ—ನಾವೂ ಕೆಟ್ಟು ಸಮಾಜವನ್ನೂ ಕೆಡಿಸುತ್ತೇವೆ. ಆದ್ದರಿಂದ ಸಮಾಜವನ್ನು ನಮ್ಮ ವ್ಯಕ್ತಿತ್ವದ ಭಾಗವಾಗಿ ಪರಿಗಣಿಸುವುದು ಅತ್ಯಂತ ಮುಖ್ಯ. ಹೀಗೆ ಸಮಾಜದ ವಿಷಯದಲ್ಲಿ ಒಂದು ಪೂರ್ಣದೃಷ್ಟಿಯನ್ನು ಹೊಂದಿರುವುದು, ವ್ಯಕ್ತಿ ಮತ್ತು ಸಮಾಜದ ಹಿತದೃಷ್ಟಿಯಿಂದ, ನಮಗೆಲ್ಲರಿಗೂ ಅತ್ಯಾವಶ್ಯಕ.

ನಾವು ಮಾಡುವ ಕೆಲಸದ ವಿಷಯದಲ್ಲಿಯೂ ಒಂದು ಪೂರ್ಣತೆಯ ದೃಷ್ಟಿ ಇರಬೇಕು. ನಮ್ಮ ಕೆಲಸವಾವುದೂ ಪೂರ್ಣ ವೈಯಕ್ತಿಕವಲ್ಲ, ಅದಕ್ಕೆ ಸಾಮಾಜಿಕ ಆಯಾಮವಿರುತ್ತದೆ. ನಾವು ಮಾಡುವ ಪ್ರತಿಯೊಂದು ಕೆಲಸವೂ, ನಾವು ಹೇಗೆ ಮಾಡುತ್ತೇವೆ ಎಂಬುದನ್ನು ಅವಲಂಬಿಸಿ, ಸಮಾಜದ ಮೇಲೆ ಒಳ್ಳೆಯ ಅಥವಾ ಕೆಟ್ಟ ಪರಿಣಾಮವನ್ನುಂಟುಮಾಡುತ್ತದೆ. ನಮ್ಮ ನಡೆ ನುಡಿಗಳೆಲ್ಲವೂ ಸಮಾಜದ ಮೇಲೆ ಒಂದಲ್ಲ ಒಂದು ರೀತಿಯ ಪರಿಣಾಮವನ್ನು ಉಂಟುಮಾಡುತ್ತಿರುತ್ತವೆ. ನಾವು ಸುಮ್ಮನೆ ಕುಳಿತಿದ್ದರೂ ನಮ್ಮ ವ್ಯಕ್ತಿತ್ವಕ್ಕನುಸಾರವಾದ ಸ್ಪಂದನಗಳು ನಮಗರಿವಿಲ್ಲದಂತೆಯೇ ಇತರರ ಮೇಲೆ ಪ್ರಭಾವ ಬೀರುತ್ತಿರುತ್ತವೆ. ಆದ್ದರಿಂದ ಪೂರ್ಣ ವೈಯಕ್ತಿಕತೆ ಎಂಬುದು ಇಲ್ಲವೇ ಇಲ್ಲ. ಈ ಪೂರ್ಣತೆಯ ದೃಷ್ಟಿ ನಮ್ಮಲ್ಲಿದ್ದರೆ ನಾವು ಮಾಡುವ ಪ್ರತಿಯೊಂದು ಕಾರ್ಯವೂ ವೈಯಕ್ತಿಕವಾಗಿ ಮಾತ್ರವಲ್ಲ ಸಾಮಾಜಿಕವಾಗಿಯೂ ಅರ್ಥಪೂರ್ಣವಾಗುತ್ತದೆ.

**ಇತರರ ಒಳಿತಿಗಾಗಿ ಶ್ರಮಿಸದ ವ್ಯಕ್ತಿಯು**
**ತನ್ನ ಒಳಿತನ್ನು ಸಾಧಿಸಲಾರನು.**

—ಎಪಿಕ್ಟೆಟಿಸ್

ಹೀಗೆಯೇ ಇಡೀ ಸೃಷ್ಟಿಯನ್ನು ಪೂರ್ಣದೃಷ್ಟಿಯಿಂದ ನೋಡಬೇಕು. ನಾವೆಲ್ಲರೂ ಸೃಷ್ಟಿಯ ಒಂದು ಅವಿಭಾಜ್ಯ ಅಂಗ. ಪ್ರಾಣಿ ಸಸ್ಯವರ್ಗಗಳೆಲ್ಲವೂ ಸೃಷ್ಟಿಯ ಅವಿಭಾಜ್ಯ ಅಂಗಗಳು—ನಮ್ಮ ದೇಹದಲ್ಲಿ ಕಣ್ಣು, ಕಿವಿ ಮುಂತಾದ ಅಂಗಗಳಿರುವಂತೆ. ನಮ್ಮ ದೇಹದ ಅಂಗಾಂಗಗಳಿಗೆ ನಾವು ಹಾನಿಯನ್ನುಂಟುಮಾಡುವುದಿಲ್ಲ. ಇದೇ ರೀತಿ ನಾವು ಇಡೀ ಸೃಷ್ಟಿಯೊಡನೆ ಒಂದಾದರೆ ಸೃಷ್ಟಿಯಲ್ಲಿ ಯಾವುದನ್ನೂ ಹಾನಿ ಮಾಡುವ ಪ್ರಯತ್ನ ಮಾಡುವುದಿಲ್ಲ. ಸೃಷ್ಟಿಗೆ ಹಾನಿಯುಂಟಾದರೆ ನಮಗೇ ಹಾನಿಯಾಗುತ್ತದೆ.

ಇಡೀ ವಿಶ್ವದೊಡನೆ ನಾವು ಪೂರ್ಣ ದೃಷ್ಟಿಯಿಂದಿರಬೇಕು. ನಾವು ಭೌತಿಕವಾಗಿಯೂ, ಮಾನಸಿಕವಾಗಿಯೂ ಮತ್ತು ಆಧ್ಯಾತ್ಮಿಕವಾಗಿಯೂ ಇಡೀ ವಿಶ್ವದೊಡನೆ ಒಂದಾಗಿದ್ದೇವೆ. ನಮ್ಮ ದೇಹ ಇಡೀ ವಿಶ್ವದ ದ್ರವ್ಯಸಾಗರದಲ್ಲಿ ಒಂದು ಸಣ್ಣ ಸುಳಿ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಹಾಗೆಯೇ ನಮ್ಮ ಮನಸ್ಸು ವಿಶ್ವಮನಸ್ಸಿನ ಒಂದು ಅಂಶ. ಆಧ್ಯಾತ್ಮಿಕವಾಗಿ ನಾವು ವಿಶ್ವಾತ್ಮನ ಒಂದು ಅಂಶ. ಹೀಗೆ ಯಾವುದೇ ಹಂತದಲ್ಲಿಯೂ ನಮಗೆ ವೈಯಕ್ತಿಕತೆ ಎಂಬುದಿಲ್ಲ. ನಮ್ಮ ವೈಯಕ್ತಿಕತೆಯ ಭ್ರಮೆಯನ್ನು, ಅಂದರೆ ನಮ್ಮ 'ಅಹಂ' ಅನ್ನು ತೊಡೆದುಹಾಕಿದಾಗ ಅಖಂಡಬ್ರಹ್ಮದಲ್ಲಿ ನಾವು ಒಂದಾಗುತ್ತೇವೆ—ಹನಿ ಸಮುದ್ರದೊಡನೆ ಒಂದಾಗುವಂತೆ. ಆಗ ನಾವು ನಿಜವಾಗಿಯೂ ಪೂರ್ಣರಾಗುತ್ತೇವೆ.

ವೈಯಕ್ತಿಕ ಪರಿಪೂರ್ಣತೆಯನ್ನು ಪಡೆದು, ಕ್ರಮವಾಗಿ ಸಮಾಜದೊಡನೆ, ಸೃಷ್ಟಿಯೊಡನೆ ಮತ್ತು ಇಡೀ ವಿಶ್ವದೊಡನೆ ಪೂರ್ಣತ್ವವನ್ನು ಹೊಂದಿ ಆತ್ಯಂತಿಕವಾಗಿ ಪೂರ್ಣಬ್ರಹ್ಮದೊಡನೆ ಪೂರ್ಣವೇ ಆಗಿಬಿಡುವುದು ಜೀವನದ ಗುರಿ. *

ಶಬ್ದವೆಂಬೆನೆ? ಶ್ರೋತ್ರದೆಂಜಲು
ಸ್ಪರ್ಶವೆಂಬೆನೆ? ತ್ವಕ್ಕಿನೆಂಜಲು
ರೂಪವೆಂಬೆನೆ? ನೇತ್ರದೆಂಜಲು
ರುಚಿಯೆಂಬೆನೆ? ಜಿಹ್ವೆಯೆಂಜಲು
ಪರಿಮಳವೆಂಬೆನೆ? ಘ್ರಾಣದೆಂಜಲು
ನಾನೆಂಬೆನೆ? ಅರಿವಿನೆಂಜಲು
ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ
ಬೆಳಗು ಗುಹೇಶ್ವರ ಲಿಂಗವು. —ಅಲ್ಲಮಪ್ರಭು